

# ನಿನಗೆ ಬದಲಾಗಿ ಇನ್ನೊಬ್ಬರು

VOJ.TRACTS/2013/KANNADA

# ನಿನಗೆ ಬದಲಾಗಿ ಇನ್ನೊಬ್ಬರು

ಒಂದಾನೊಂದು ಕಾಲದಲ್ಲಿ, ಒಂದು ಕುಟುಂಬದಲ್ಲಿ ಅವಳಿಜವಳಿ ಮಕ್ಕಳಿದ್ದರು. ಇವರಿಬ್ಬರು ಒಡಹುಟ್ಟಿದ್ದಂತ ಸಹೋದರರು. ನೋಡಲು ಇವರು ಒಂದೇ ರೀತಿಯಾಗಿಯೂ ಹೊಂದಾಣಿಕೆಯಾಗಿಯೂ ಇರುವವರಂತೆ ಕಂಡು ಬಂದರು, ಯಾವ ಒಂದು ವ್ಯತ್ಯಾಸವನ್ನು ಕಂಡು ಹಿಡಿಯಲು ಸಾಧ್ಯವಿರಲಿಲ್ಲ. ತೋರಿಕೆಗೆ ಇಬ್ಬರು ಒಂದೇ ರೀತಿಯಾಗಿಯೆ ಇದ್ದರು. ಇಬ್ಬರು ತಮ್ಮ ಒಂದು ಗುಣಭಾವದಲ್ಲಿ ಬೇರೆ ಬೇರೆಯಾಗಿದ್ದರು. ಹಿರಿಯವನು ದೇವಭಯ ವುಳ್ಳವನಾಗಿ, ಒಳ್ಳೇಯವನಾಗಿ ಬಾಳುತ್ತಿದ್ದನು. ಆದರೆ ಕಿರಿಯವನು ಪಾಪದ ಕಾರ್ಯಗಳನ್ನು ಮಾಡುತ್ತಾ ತನ್ನ ಮನಸಿನಂತೆ ಬಾಳುತ್ತಿದ್ದನು.

ಒಂದು ದಿನ ಕಿರಿಯವನು ಒಂದು ಜಗಳದಲ್ಲಿ ಒಬ್ಬನನ್ನು ಕೊಲೆ ಮಾಡಿಬಿಟ್ಟನು. ಅಲ್ಲಿದ್ದಂತ ಜನಗಳ ದೂರಿನ ಮೇರೆಗೆ ಪೋಲಿಸರು ಅವನನ್ನು ಬೆನ್ನಟ್ಟಿಕೊಂಡು ಬಂದರು. ಅವನು ತಕ್ಷಣ ತನ್ನ ಮನೆಯ ಕಡೆಗೆ ಓಡಿದನು. ಮನೆಗೆ ಸೇರಿ ಒಳಗೆ ಹೊಕ್ಕಿ ಬಾಗಿಲನ್ನು ಮುಚ್ಚಿಕೊಂಡನು. ತನ್ನ ಅಣ್ಣನು ಒಳಗೆ ಇರುವಂತದ್ದನ್ನು ಕಂಡು ತನ್ನ ಅಣ್ಣನ ಕೈಹಿಡಿದು "ನನ್ನ ಅಣ್ಣನೆ ನನ್ನನ್ನು ಕಾಪಾಡು ನಾನು ಒಂದು ಕೊಲೆ ಮಾಡಿಬಿಟ್ಟೆನು. ಪೋಲಿಸರು ನನ್ನನ್ನು ಬೆನ್ನಟ್ಟಿ ಬರುತ್ತಿದ್ದಾರೆ." ಎಂದು ಬೇಡುತ್ತಾ ಅಂಗಲಾಚಿದನು.ತಮ್ಮನ ಘೋರ ಸ್ಥಿತಿ ಯನ್ನು ಕಂಡಂತ ಅಣ್ಣನು ಅವನ ಮೇಲೆ ಮನಮರುಗಿ ತನ್ನ ತಮ್ಮನಿಗೆ ರಕ್ತ ಕರೆಯಾಗಿದ್ದ ಅವನ ಬಟ್ಟೆಯನ್ನು ಕಳೆಯಲು ಹೇಳಿ ಅದನ್ನು ಅವನು ಹಾಕಿಕೊಂಡನು ಅದೇ ಕ್ಷಣ ಮನೆ ಬಾಗಿಲನ್ನು ಪೋಲಿಸರು ಬಲವಾಗಿ ತಟ್ಟುತ್ತಿದ್ದರು ತನ್ನ ತಮ್ಮನ್ನನ್ನು ಹುಡುಕುತ್ತಿ ರುವದ್ದನ್ನು ತಿಳಿದು, ತಡಮಾಡದೆ ರಕ್ತ ಕರೆಯೊಂದಿಗೆ ಕೂಡಿದ ತಮ್ಮನ್ನ ಬಟ್ಟೆಯೊಂದಿಗೆ ತಾನು ಅಪರಾಧ ಮಾಡಿದವನಾಗಿ ಹೇಳಿ ಶರಣಾದನು.

ತಮ್ಮನ ಹಾಗೆಯೆ ಮುಖಭಾವವನ್ನು ಹೊಂದಿದ್ದ ಅಣ್ಣನು ಅಪರಾಧಿಯಾಗಿ ನಿರ್ಣಯಿಸಲ್ಪಟ್ಟು ನ್ಯಾಯಾಲಯಕ್ಕೆ ಕೊಂಡೊಯ್ಯಲ್ಪಟ್ಟನು. ನ್ಯಾಯಾಲಯದಲ್ಲಿ ಆ ಘೋರ ಕೊಲೆಯ ನಿಮಿತ ಅವನಿಗೆ ಗಲ್ಲು ಶಿಕ್ಷೆ ನೀಡಿತು. ಈ ಶಿಕ್ಷೆಯನ್ನು ತಿಳಿದು ಅವನು ಬೆಚ್ಚಿದನು.ತನ್ನ ತಮ್ಮನ ನಿಮಿತ ತಾನೆ ಗಲ್ಲು ಶಿಕ್ಷೆಯನ್ನು ಹೊಂದಿ ಸಾಯುವದನ್ನು ಕಂ ಡು ಸಂತೋಷಪಟ್ಟನು. ಅವನು ಈ ಘೋರ ದಂಡನೆಯನ್ನು ಅನುಭವಿಸುವದಕ್ಕೂ ಮುನ್ನ ಒಂದು ಸುದ್ದಿಯನ್ನು ತನ್ನ ತಮ್ಮನಿಗೆ ಬಹು ವೇಗವಾಗಿ ಬರೆದನು. ನಿನಗೆ ಬದಲಾಗಿ ನಾನು ಸಾಯುತ್ತೇನೆ. ಇದನ್ನು ನೆನಸಿಕೊಂಡಾದರೂ ನಿನ್ನ ಪಾಪದ ಮಾರ್ಗವನ್ನು ಬಿಟ್ಟು ಒಳ್ಳೆಯವನಾಗಿ ನಡೆದುಕೊ. ರಹಸ್ಯವಾಗಿ ತನ್ನ ತಮ್ಮನಿಗೆ ಕಳುಹಿಸಿದನು ಅದನ್ನು ಓದಿದ ತಮ್ಮನು ಬಹಳವಾಗಿ ಬಿಕ್ಕಿ ಬಿಕ್ಕಿ ಅತ್ತನು ಅಣ್ಣನು ತನಗಾಗಿ ಮಾಡಿದ ಈ ಮಹಾತ್ಯಾಗವನ್ನು ಕಂಡು ಆ ಗಳಿಗೆಯೆ ಮಾನಾಸಾಂತರ ಹೊಂದಿದನು.

ಪ್ರಿಯರೆ ಈ ತಮ್ಮನ ಹಾಗೆಯೆ ಮಾನವರಾದ ನಾವುಗಳು ಪಾಪ ಮಾಡಿದರ ನಿಮಿತ ಘೋರ ನರಕ ದಂಡನೆಯನ್ನು ಅನುಭವಿಸಬೇಕಾಗಿತ್ತು, ಆದರೆ ಆ ಘೋರ ನರಕ ದಂಡನೆಯಿಂದ ನಾವು ತಪ್ಪಿಸಿಕೊಳ್ಳುವಂತೆ ಒಬ್ಬರು ಆ ದಂಡನೆಯನ್ನು ಮುಂಚಿತವಾಯೆ ಅನುಭವಿಸಿಬಿಟ್ಟರು.

ಏನು? ನಾನು ಮಾಡಿದ ತಪ್ಪಿಗಾಗಿ ಬೇರೊಬ್ಬರು ತನ್ನ ಮೇಲೆ ದಂಡನೆಯನ್ನು ಹೊತ್ತುಕೊಂಡರೆ? ಆ ದಂಡನೆಯನ್ನು ಅವರೇ ಅನುಭವಿಸಿದರೆ? ಎಂದು ತಾನೆ ನೀವು ಯೋಚಿಸುತ್ತೀರಾ?

ದೇವರು ಮನುಷ್ಯರ ಮೇಲೆ ಇಟ್ಟಂತ ಪ್ರೀತಿಯ ನಿಮಿತ ಅವರು ತಮ್ಮ ಪಾಪದ ದೆಸಿಯಿಂದ ಹೊಂದಬೇಕಾದ ದಂಡನೆಯನ್ನು ಅವರಿಗೆ ಬದಲಾಗಿ ತಾನೆ ಹೊತ್ತು ಕೊಂಡನು ಪಾಪವಿಲ್ಲದ ಆತನು ನಮ್ಮ ಪಾಪದ ನಿಮಿತ ತನ್ನ ತನ್ನ ಮೇಲೆ ಹೊತ್ತುಕೊಂಡನು. ನಮಗೆ ಬದಲಾಗಿ ಜಡಿಯಲ್ಪಟ್ಟನು. ನಾವು ಅನುಭವಿಸಬೇಕಾದ ದಂಡನೆಯನ್ನು ಆತನು ಹೊತ್ತುಕೊಂಡನು ನಮ್ಮ ಪಾಪದ ದೆಸೆಯಿಂದ ಅವನಿಗೆ ಗಾಯವಾಯಿತು. ಅದು ಏನು ಗೊತ್ತೆ?

ಶಿಲುಬೆ ಮರಣ: ಶಿಲುಬೆಯಲ್ಲಿ ತನ್ನ ಜೀವವನ್ನು ನಮಗಾಗಿ ತ್ಯಾಗ ಮಾಡಿದನು ತನ್ನನ್ನು ಈ ಶಿಲುಬೆ ದಂಡನೆಗೆ ಒಪ್ಪಿಸಿಕೊಟ್ಟಂತ ಯೇಸು ಕ್ರಿಸ್ತನು ನಮಗೆ ಬಿಡುಗಡೆಯನ್ನು ಜೀವವನ್ನು ಇದರ ಮೂಲಕ ಪಡೆದುಕೊಟ್ಟನು ಇಂದು ನಾವು ಆತನನ್ನು ನಮ್ಮ ಹೃದಯದಲ್ಲಿ ಅಂಗೀಕರಿಸಿ ಆತನಿಗೆ ನಮ್ಮನ್ನು ಒಪ್ಪಿಸಿಕೊಟ್ಟರೆ ನಮ್ಮ ಪಾಪದ ನಿಮಿತ ಉಂಟಾದ ದಂಡನೆಯನ್ನು ನಮ್ಮಿಂದ ಹೋಗಲಾಡಿಸಿ ಹೊಸ ಬಾಳನ್ನು ನಮಗೆ ಕೊಡಲು ಇಚ್ಚೆಯುಳ್ಳವನಾಗಿದ್ದಾನೆ.

ಯೇಸು ತನ್ನ ಹತ್ತಿರ ಬರುವ ಯಾರನ್ನು ತಳ್ಳುವದಿಲ್ಲ ಅವರನ್ನು ಪ್ರಿತಿಯಿಂದ ಬರಮಾಡಿಕೊಳ್ಳುತ್ತಾನೆ ಅವರ ಪಾಪದ ದೆಸೆಯಿಂದ ಉಂಟಾದ ದಂಡನೆಯಾದ ರೋಗ, ಮರಣ, ಸಾಲದ ತೊಂದರೆ, ಬಡತನ, ವೇದನೆ ಆತ್ಮಹತ್ಯೆ ಯೋಚನೆ ತಲತಲಾಂತರದ ಶಾಪಗಳಿಂದ ಸಂಪೂರ್ಣವಾಗಿ ಬಿಡುಗಡೆ ನೀಡಿ ಆಶೀರ್ವದಿಸುತ್ತಾನೆ.

ನಮ್ಮ ಮೇಲೆ ಪ್ರೀತಿಯನ್ನು ನಮಗಾಗಿ ತನ್ನ ಜೀವವನ್ನೆ ಕೊಟ್ಟಾತನು ಇಂದು ನಾವು ಬೇಡಿಕೊಳ್ಳುವ ಯಾವ ಕಾರ್ಯಗಳಿಗೂ ನಮಗೆ ಉತ್ತರ ನೀಡದೆ ಇರುವನೆ? ಎಂದಿಗೂ ಇಲ್ಲ. ನಿಮ್ಮ ಹೃದಯದಲ್ಲಿ ಆತನಿಗೆ ಸ್ಥಳಕೊಟ್ಟು ಸಮೃದ್ಧಿಯಾದ ಜೀವನವನ್ನು ಸ್ವಂತ ಮಾಡಿಕೊಳ್ಳಿರಿ.

*ನನ್ನ ತೋಟವನ್ನು ಏನು ಮಾಡುವೆನೋ ಈಗ ನಿಮಗೆ ತಿಳಿಸುವೆನು ಕೇಳಿರಿ; ಅದರ ಬೇಲಿಯನ್ನು ಕೀಳುವೆನು, ದನವು ಆ ದನ್ನು ಮೇಯ್ದುಬಿಡುವದು; ಅದರ ಗೋಡೆಯನ್ನು ಕೆಡವಿ ಹಾಕುವೆನು, ಅದು ತುಳಿದಾಟಕ್ಕೆ ಈಡಾಗುವದು.*

*(ಯೆಶಾಯ:5:5)*

*ಆದರೆ ನಾವು ಪಾಪಿಗಳಾಗಿದ್ದಾಗಲು ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ.*

*(ರೋಮಾ:5:8)*

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ದೇ ಆದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಛಿಸಿ ಪುಸ್ತಕ ಮತ್ತು ಸಿಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.


**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com


ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ